# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-8428/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 23/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ರಾಮಚಂದ್ರಯ್ಯ, ಉಪ ಆಯುಕ್ತರು, ಅಬಕಾರಿ ಇಲಾಖೆ, ಚಿತ್ರದುರ್ಗ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ವೈ.ಇ.ನವೀನ್‌ಕುಮಾರ್ ಬಿನ್ ಈಶ್ವರರೆಡ್ಡಿ, ಬೇಡರೆಡ್ಡಿಹಳ್ಳಿ ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ರಾಮಚಂದ್ರಯ್ಯ, ಉಪ ಆಯುಕ್ತರು, ಅಬಕಾರಿ ಇಲಾಖೆ, ಚಿತ್ರದುರ್ಗ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಮದ್ಯದಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿರದೇ ಇದ್ದರೂ ಸಹ ಎದುರುದಾರರು ಅವಕಾಶ ಮಾಡಿಕೊಟ್ಟಿರುತ್ತಾರೆಂದು, ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಅಬಕಾರಿ ಇಲಾಖೆಯ ಷರತ್ತುಗಳ ಪ್ರಕಾರ ಇಡೀ ಜಿಲ್ಲೆಯಲ್ಲಿ ಯಾವುದೇ ಅಂಗಡಿ ಕಾನೂನು ರೀತಿ ನಡೆಯುತ್ತಿಲ್ಲವೆಂದು, ಈ ಸಂಬಂಧ ಎದುರುದಾರರಿಗೆ ಲಿಖಿತ ದೂರು ನೀಡಿದ್ದರೂ ಸಹ ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು, ಜಿಲ್ಲೆಯ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಗಟು/ಚಿಲ್ಲರೆ ದರಕ್ಕಿಂತ ಹೆಚ್ಚಿಗೆ ಮಾರಾಟ ಮಾಡುತ್ತಿದ್ದು, ಈ ಕುರಿತು ಯಾವುದೇ ರಸೀದಿಯನ್ನು ನೀಡುತ್ತಿಲ್ಲವೆಂದು, ಮೊಳಕಾಲ್ಮೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕೊಂಡ್ಲಹಳ್ಳಿಯಲ್ಲಿ ನಾಮಫಲಕ ಅಥವಾ ಅಂಗಡಿಯ ಹೆಸರೇ ಇಲ್ಲದಿರುವ ಬಗ್ಗೆ ಅಬಕಾರಿ ನಿರೀಕ್ಷಕರು ಮೊಳಕಾಲ್ಮೂರು ಇವರನ್ನು ಮೌಖಿಕವಾಗಿ ಮಾಹಿತಿಯನ್ನು ತಿಳಿಸಿದ್ದರೂ ಸಹ ಸದರಿಯವರು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದಿಲ್ಲವೆಂದು ಎದುರುದಾರರು ಈ ಮೇಲ್ಕಂಡ ಎಲ್ಲಾ ಅವ್ಯವಹಾರಗಳಲ್ಲಿ ಮದ್ಯ ಮಾರಾಟಗಾರರೊಂದಿಗೆ ಶಾಮೀಲಾಗಿ ಕರ್ತವ್ಯ ನಿರ್ಲಕ್ಷ್ಯತೆ/ಕರ್ತವ್ಯಲೋಪ ಎಸಗುತ್ತಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ

i. ಸಿ.ಎಲ್.-2 ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿಲ್ಲವಾದರೂ ಕಾನೂನು ಬಾಹಿರವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿರುತ್ತದೆ ಮತ್ತು ಜಿಲ್ಲೆಯ ಅಬಕಾರಿ ಇಲಾಖೆಯ ಅಧಿಕಾರಿಗಳು ಇದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡಿರುವುದು ಕಂಡುಬಂದಿರುತ್ತದೆ. ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ-1965 ಕಲಂ 36(ಬಿ) ಪ್ರಕಾರ ದಾಖಲಿಸಿರುವುದು ಕಂಡುಬರುತ್ತದೆ.

ii. ಸಿ.ಎಲ್-9 ಬಾರ್ ಅಂಡ್ ರೆಸ್ಟೋರೆಂಟ್ ಮದ್ಯದ ಅಂಗಡಿಗಳಲ್ಲಿಯೂ ಸಹ ಕರ್ನಾಟಕ ಅಬಕಾರಿ ಕಾಯ್ದೆ-1965 ರ ನಿಯಮಾನುಸಾರ ನಡೆಸಲು ನಿಗದಿತ ಸಮಯ ಮೀರಿ ಮದ್ಯದ ಅಂಗಡಿಗಳನ್ನು ತೆರೆದು ಮದ್ಯದ ಮಾರಾಟ ಮತ್ತು ಸೇವನೆಗೆ ಅವಕಾಶ ಮಾಡಿಕೊಡುತ್ತಿರುವುದು ಸಹ ಸರ್ವೇಸಾಮಾನ್ಯವಾಗಿರುತ್ತದೆ. ಈ ಬಗ್ಗೆಯೂ ಸಹ ಚಿತ್ರದುರ್ಗ ಜಿಲ್ಲಾ ಅಬಕಾರಿ ಇಲಾಖೆಯ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿರುವುದು ಕಂಡುಬಂದಿರುತ್ತದೆ. ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ-1965 ಕಲಂ 15, 15(ಎ), 32(3) ಮತ್ತು 36(ಬಿ) ಪ್ರಕಾರ ದಾಖಲಿಸಿರುವುದು ಕಂಡುಬರುತ್ತದೆ.

iii. ಜಿಲ್ಲೆಯಲ್ಲಿನ ಮದ್ಯದ ಅಂಗಡಿಗಳಲ್ಲಿ ಮದ್ಯದ ಬಾಟಲ್ ಮೇಲಿರುವ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿಗೆ ದರಕ್ಕೆ ಮಾರಾಟ ಮಾಡುತ್ತಿರುವುದು ಹಾಗೂ ಮದ್ಯದ ಅಂಗಡಿಗಳಲ್ಲಿ ಮಾರಾಟ ಮಾಡುವ ಮದ್ಯಗಳಿಗೆ ಯಾವುದೇ ರಸೀದಿಗಳನ್ನು ನೀಡದಿರುವುದು ಸಹ ಕಂಡುಬಂದಿರುತ್ತದೆ. ಅಲ್ಲದೆ ಪ್ರತಿ ಗ್ರಾಮಗಳಲ್ಲಿಯೂ ಅನಧಿಕೃತವಾಗಿ ಮದ್ಯದ ಮಾರಾಟ ಅವ್ಯಾಹತವಾಗಿ ನಡೆದಿದ್ದರೂ ಸಹ ಅಬಕಾರಿ ಇಲಾಕೆ ಅಧಿಕಾರಿಗಳು ಯಾವುದೇ ಕಾನೂನು ಕ್ರಮ ಕಟ್ಟು ನಿಟ್ಟಿನ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದು ವಿಚಾರಣಾಧಿಕಾರಿಯವರು ವರದಿಯನ್ನು ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ.

4) ವಿಚಾರಣಾ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದೂರಿನಲ್ಲಿರುವ ಆಪಾದನೆ ಹಾಗೂ ವಿಚಾರಣಾಧಿಕಾರಿಯ ವರದಿಯನ್ನು ಅಲ್ಲಗಳೆದಿರುತ್ತಾರೆ. ಕಾನೂನು ಬಾಹಿರವಾಗಿ ಮದ್ಯದಂಗಡಿಗಳಲ್ಲಿ ಬಿಡಿ ಮದ್ಯವನ್ನು ಮಾರಾಟ ಮಾಡುವ ಬಗ್ಗೆ ಮತ್ತು ಮದ್ಯ ಮಾರಾಟ ಮಾಡುವಾಗ ರಸೀದಿಗಳನ್ನು ನೀಡದೇ ಇರುವ ಬಗ್ಗೆ ಮತ್ತು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಅವರ ಇಲಾಖಾ ಅಧಿಕಾರಿಗಳನ್ನು ನೇಮಿಸಿದ್ದು, ಕಾನೂನು ಬಾಹಿರಾಗಿ ನಿಯಮ ಉಲ್ಲಂಘಿಸಿದವರ ವಿರುದ್ಧ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ದಂಡವನ್ನು ವಸೂಲಿ ಮಾಡಲಾಗಿದೆ. ಅವರ ಅಧಿಕಾರಾವಧಿಯಲ್ಲಿ ನಿಷ್ಠೆಯಿಂದ ಕರ್ತವ್ಯವನ್ನು ಮಾಡಿರುತ್ತಾರೆಂದು ಹೇಳಿರುತ್ತಾರೆ.

5) ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರ ವರದಿಯನ್ನು ಪರಿಶೀಲಿಸಿದಾಗ, ಚಿತ್ರದುರ್ಗ ಜಿಲ್ಲೆಯಲ್ಲಿ ಮದ್ಯದ ಅಂಗಡಿ ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ನಿಯಮಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದ್ದು, ಅಬಕಾರಿ ಇಲಾಖೆಯ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕ್ರಮವನ್ನು

ಕೈಗೊಂಡಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುವುದಾಗಿದೆ. ಅಲ್ಲದೆ, ಎದುರುದಾರರ ವಿರುದ್ಧ ಚಿತ್ರದುರ್ಗ ಲೋಕಾಯುಕ್ತ ಪೊಲೀಸ್ ಠಾಣೆ ಮೊ.ಸಂ.13/2013 ರ ರೀತ್ಯ ಪ್ರಕರಣ ದಾಖಲಾಗಿದ್ದು, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆಯೆಂದು ಹೇಳಿರುತ್ತಾರೆ. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡಿದ ಬಗ್ಗೆ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ದಂಡವನ್ನು ವಸೂಲಿ ಮಾಡಲಾಗಿದೆಯೆಂದು ಹೇಳಿರುತ್ತಾರೆ.

6) ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ ಇವರು ಮಾನ್ಯ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ ಕಳುಹಿಸಿರುವ ವರದಿಯಲ್ಲಿ 2016–17ನೇ ಸಾಲಿನಲ್ಲಿ ಮತ್ತು ಜುಲೈ 2017 ರ ಮಾಹೆಯಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ ವಿವರವಾದ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ಸದರಿ ವರದಿಯಲ್ಲಿ ದಾಖಲಾದ ಅಬಕಾರಿ ಪ್ರಕರಣಗಳು, ಪ್ರಕರಣಗಳಲ್ಲಿ ವಿಧಿಸಿದ ದಂಡ, ವಸೂಲಾದ ದಂಡ ಮತ್ತು ಬಾಕಿಯದ ದಂಡದ ವಿಚಾರವಾಗಿ ವರದಿಯನ್ನು ನೀಡಿರುವುದು ಹಾಗೂ ಅಬಕಾರಿ ಪ್ರಕರಣವನ್ನು ದಾಖಲಿಸುವ ಬಗ್ಗೆ ವರದಿಯನ್ನು ನೀಡಿರುವುದು ಕಂಡುಬರುತ್ತದೆ.

7) ವರದಿಯ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ವೈನ್ ಸ್ಟೋರ್‌ಗಳಲ್ಲಿ ಚಿಲ್ಲರೆ ಮದ್ಯ ಮಾರಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ ಅಬಕಾರಿ ಕಾಯಿದೆಯಡಿ ಪ್ರಕರಣಗಳನ್ನು ದಾಖಲಿಸಿರುವುದು ಕಂಡುಬರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಿದಾಗ, ಆರೀತಿಯ ನೂರಾರು ಪ್ರಕರಣಗಳು ದಾಖಲಾಗಿರುವುದು ಕಂಡುಬರುತ್ತಿದ್ದು, ಅದನ್ನು ಗಮನಿಸಿದಾಗ, ಪರವಾನಗಿಯನ್ನು ಪಡೆದ ವ್ಯಕ್ತಿಗಳು ಕರ್ನಾಟಕ ಅಬಕಾರಿ ಕಾಯಿದೆಯ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯಾಪಾರ ವಹಿವಾಟನ್ನು ನಡೆಸುತ್ತಿರುವುದು ಕಂಡುಬರುತ್ತಿದ್ದು, ಅಂತಹ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿರುವುದು ಕಂಡುಬರುತ್ತದೆ. ಲೈಸೆನ್ಸ್ ನಿಬಂಧನೆ ಹಾಗೂ ಷರತ್ತುಗಳನ್ನು ಉಲ್ಲಂಘಿಸಿ ಸನ್ನದುದಾರರ ವ್ಯವಹಾರವನ್ನು ಮಾಡುತ್ತಿದ್ದರೂ ಸಹ ಕೇವಲ ಮೊಕದ್ದಮೆಗಳನ್ನು ದಾಖಲಿಸಿ ದಂಡವನ್ನು ವಸೂಲಿ ಮಾಡುವ ಹೊರತಾಗಿ ಸನ್ನದುದಾರರು ಮಾಡುವ ಮೇಲೆ ಹೇಳಿದ ಷರತ್ತು ಉಲ್ಲಂಘನಾ ಪ್ರಕರಣಗಳಲ್ಲಿ ಬೇರೆ ಯಾವುದೇ ಕ್ರಮವನ್ನು ಕೈಗೊಂಡಿರುವುದು ಕಂಡುಬರುತ್ತಿಲ್ಲ. ಕೇವಲ ದಂಡವನ್ನು ವಿಧಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿದರೆ ಸನ್ನದುದಾರರು ಪುನಃ ಅಬಕಾರಿ ಕಾಯಿದೆ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿ ಚಿಲ್ಲರೆ ಮದ್ಯ ಮಾರಾಟ ಮಾಡುವುದು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರಗಳನ್ನು ಮಾಡುವುದನ್ನು ಮುಂದುವರೆಸುತ್ತಾರೆ ಮತ್ತು ಅದನ್ನು ತಡೆಗಟ್ಟಲು ಕಷ್ಟಸಾಧ್ಯವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಸನ್ನದನ್ನು ರದ್ದುಮಾಡುವುದು ಅಥವಾ ನಿಲಂಬನೆ ಮಾಡುವಂತಹ ಕ್ರಮವನ್ನು ಅಬಕಾರಿ ಅಧಿಕಾರಿಗಳು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

8) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 29 ರನ್ವಯ ಲೈಸೆನ್ಸ್ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡುವ ಸನ್ನದುದಾರರ ಸನ್ನದುಗಳನ್ನು ರದ್ದುಮಾಡಲು ಅಥವಾ ನಿಲಂಬನೆ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಶಿಫಾರಸ್ಸು ಮಾಡಲಾಗಿತ್ತು.

9) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಇವರು ತಮ್ಮ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(1) ರನ್ವಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಶಿಫಾರಸ್ಸಿನನ್ವಯ ಅಬಕಾರಿ ಆಯುಕ್ತರು ನಿಯಮಗಳನುಸಾರ ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಈಗಾಗಲೇ ಸಲ್ಲಿಸಿರುತ್ತಾರೆಂದು ಅಬಕಾರಿ ಆಯುಕ್ತರ ವರದಿಯ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ.

10) ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ ಇವರು ಮಾನ್ಯ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ ಕಳುಹಿಸಿರುವ ವರದಿಯಲ್ಲಿ 2016-17ನೇ ಸಾಲಿನಲ್ಲಿ ಮತ್ತು ಜುಲೈ 2017 ರ ಮಾಹೆಯಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ ವಿವರವಾದ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ಸದರಿ ವರದಿಯಲ್ಲಿ ದಾಖಲಾದ ಅಬಕಾರಿ ಪ್ರಕರಣಗಳು, ಪ್ರಕರಣಗಳಲ್ಲಿ ವಿಧಿಸಿದ ದಂಡ, ವಸೂಲಾದ ದಂಡ ಮತ್ತು ಬಾಕಿಯದ ದಂಡದ ವಿಚಾರವಾಗಿ ವರದಿಯನ್ನು ನೀಡಿರುವುದು ಹಾಗೂ ಅಬಕಾರಿ ಪ್ರಕರಣವನ್ನು ದಾಖಲಿಸುವ ಬಗ್ಗೆ ವರದಿಯನ್ನು ನೀಡಿರುವುದು ಕಂಡುಬರುತ್ತದೆ.

11) ವರದಿಯ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ವೈನ್ ಸ್ಟೋರ್‌ಗಳಲ್ಲಿ ಚಿಲ್ಲರೆ ಮದ್ಯ ಮಾರಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ ಅಬಕಾರಿ ಕಾಯಿದೆಯಡಿ ಪ್ರಕರಣಗಳನ್ನು ದಾಖಲಿಸಿರುವುದು ಕಂಡುಬರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಿದಾಗ, ಆರೀತಿಯ ನೂರಾರು ಪ್ರಕರಣಗಳು ದಾಖಲಾಗಿರುವುದು ಕಂಡುಬರುತ್ತಿದ್ದು, ಅದನ್ನು ಗಮನಿಸಿದಾಗ, ಪರವಾನಗಿಯನ್ನು ಪಡೆದ ವ್ಯಕ್ತಿಗಳು ಕರ್ನಾಟಕ ಅಬಕಾರಿ ಕಾಯಿದೆಯ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯಾಪಾರ ವಹಿವಾಟನ್ನು ನಡೆಸುತ್ತಿರುವುದು ಕಂಡುಬರುತ್ತಿದ್ದು, ಅಂತಹ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿರುವುದು ಕಂಡುಬರುತ್ತದೆ. ಲೈಸೆನ್ಸ್ ನಿಬಂಧನೆ ಹಾಗೂ ಷರತ್ತುಗಳನ್ನು ಉಲ್ಲಂಘಿಸಿ ಸನ್ನದುದಾರರ ವ್ಯವಹಾರವನ್ನು ಮಾಡುತ್ತಿದ್ದರೂ ಸಹ ಕೇವಲ ಮೊಕದ್ದಮೆಗಳನ್ನು ದಾಖಲಿಸಿ ದಂಡವನ್ನು ವಸೂಲಿ ಮಾಡುವ ಹೊರತಾಗಿ ಸನ್ನದುದಾರರು ಮಾಡುವ ಮೇಲೆ ಹೇಳಿದ ಷರತ್ತು ಉಲ್ಲಂಘನಾ ಪ್ರಕರಣಗಳಲ್ಲಿ ಬೇರೆ ಯಾವುದೇ ಕ್ರಮವನ್ನು ಕೈಗೊಂಡಿರುವುದು ಕಂಡುಬರುತ್ತಿಲ್ಲ. ಕೇವಲ ದಂಡವನ್ನು ವಿಧಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿದರೆ ಸನ್ನದುದಾರರು ಪುನಃ ಅಬಕಾರಿ ಕಾಯಿದೆ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿ ಚಿಲ್ಲರೆ ಮದ್ಯ ಮಾರಾಟ ಮಾಡುವುದು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರಗಳನ್ನು ಮಾಡುವುದನ್ನು

ಮುಂದುವರೆಸುತ್ತಾರೆ ಮತ್ತು ಅದನ್ನು ತಡೆಗಟ್ಟಲು ಕಷ್ಟಸಾಧ್ಯವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಸನ್ನದನ್ನು ರದ್ದುಮಾಡುವುದು ಅಥವಾ ನಿಲಂಬನೆ ಮಾಡುವಂತಹ ಕ್ರಮವನ್ನು ಅಬಕಾರಿ ಅಧಿಕಾರಿಗಳು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

12) ಈ ಹಂತದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 29 ನ್ನು ಗಮನಿಸುವುದು ಸೂಕ್ತವೆಂದು ಕಂಡುಬರುತ್ತದೆ.

**29.ಲೈಸೆನ್ಸು ಇತ್ಯಾದಿಗಳನ್ನು ರದ್ದು ಮಾಡಲು ಅಥವಾ ನಿಲಂಬನ ಮಾಡಲು ಶಕ್ತಿ** : (1) ರಾಜ್ಯ ಸರ್ಕಾರವು ನಿಮಿಸಬಹುದಾದಂಥ ನಿರ್ಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಅಥವಾ ಅನುಮತಿ ಪತ್ರವನ್ನು ಕೊಡುವ ಪ್ರಾಧಿಕಾರಿಯು,=

(ಕ) ಅದನ್ನು ಪಡೆದವನು ಸಂದಾಯ ಮಾಡಬೇಕಾಗಿರುವ ಯಾವುದೇ ಶುಲ್ಕವು ಅಥವಾ ಫೀಜು ಯಥಾವಿಧಿ ಸಂದಾಯವಾಗದಿದ್ದರೆ; ಅಥವಾ

(ಖ) ಅದನ್ನು ಪಡೆದವರು ಅಥವಾ ಅವನ ಯಾವನೇ ನೌಕರನು ಅಥವಾ ಅವನ ಸ್ಪಷ್ಟ ಅಥವಾ ಇಂಗಿನ ಅನುಮತಿಯಿಂದ ಅವನ ಪರವಾಗಿ ಕೆಲಸ ಮಾಡುವ ಯಾವೊಬ್ಬನು ಅದರ ಯಾವುದೇ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಪ್ರಸಂಗದಲ್ಲಿ; ಅಥವಾ

(ಗ) ಅದನ್ನು ಪಡೆದವನು ಅಥವಾ ಅವನ ಯಾವನೇ ನೌಕರನು ಅಥವಾ ಅವನ ಸ್ಪಷ್ಟ ಅಥವಾ ಇಂಗಿತ ಅನುಮತಿಯಿಂದ ಅವರ ಪರವಾಗಿ ಕೆಲಸ ಮಾಡುವ ಯಾವೊಬ್ಬನು ಈ ಅಧಿನಿಯಮದ ಮೇರೆಗಿನ ಯಾವುದೇ ಸಿದ್ಧಾಪರಾಧಿಯಾಗಿದ್ದರೆ; ಅಥವಾ

(ಘ) ಅದನ್ನು ಪಡೆದವನು ಸಂಜ್ಞೇಯವಾದ ಮತ್ತು ಜಾಮೀನಿನ ಮೇಲೆ ಬಿಡಲಾಗದ ಯಾವುದೇ ಅಪರಾಧದ, ಅಥವಾ ಅಪಾಯಕಾರು ದ್ರವ್ಯಗಳ, ಅಧಿನಿಯಮ 1930ರ ಮೇರೆಗಿನ ಅಥವಾ ವೈದ್ಯಕೀಯ ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ ಅಧಿನಿಯಮ, 1955 ರ ಅಥವಾ ವ್ಯಾಪಾರ ಮತ್ತು ವಾಣಿಜ್ಯ ಗುರುತುಗಳ ಅಧಿನಿಯಮ , 1958 ರ ಮೇರೆಗಿನ ಅಥವಾ ಭಾರತೀಯ ದಂಡ ಸಂಹಿತೆಯ ಪ್ರಕರಣ 481, 482, 483, 484, 485, 486, 487, 488 ಅಥವಾ 489 ಮೇರೆಗಿನ ಅಥವಾ 1962ರ ಸೀಮಾ ಶುಲ್ಕ ಅಧಿನಿಯಮದ ಪ್ರಕರಣ 112 ಅಥವಾ 114 ರ ಮೇರೆಗಿನ ಯಾವುದೇ ದಂಡನೀಯವಾದ ಯಾವುದೇ ಅಪರಾಧದ ಸಿದ್ಧಾಪರಾಧಿಯಾಗಿದ್ದರೆ; ಅಥವಾ

(ಜ) ಲೈಸೆನ್ಸಿನ ಅಥವಾ ಅನುಮತಿ ಪತ್ರದ ಷರತ್ತುಗಳು ಹಾಗೆ ರದ್ದು ಮಾಡುವ ಅಥವಾ ನಿಲಂಬನ ಮಾಡುವ ಬಗ್ಗೆ ಉಪಬಂಧಿಸಿದ್ದರೆ-ಅದನ್ನು ರದ್ದು ಮಾಡಬಹುದು ಅಥವಾ ನಿಲಂಬನ ಮಾಡಬಹುದು.

Rule 7 of the Karnataka Excise (Sale of Indian and Foreign Liquors) Rules 1968 states that "all licences other than special licences and occasional licences (granted or renewed) shall be valid for the year or where a licence is granted (or renewed) on any date after the first July until the 30th June thereafter".

FORM CL-2
[(See Rule 3(2)]

Licence for the retail off vend of [Indian liquor (other than arrack)] or Foreign liquor, or both.

Register No.....................

Nme of licence holder.........

Name of agent or vendor......

| | |
|---|---|
| | Town ........... |
| Locality | Street............ |
| | Door No......... |

I,................ the Deputy Commissioner of the ...........District in consideration of the payment of the prescribed licence fee of Rs......... do hereby authorize Sri........son of Sri........... residing in ........... to sell [Indian liquor (other than arrack) or Foreign liquor of both at premises No......... situated in .......... Subject to the conditions prescribed below.

CONDITIONS

1. The licence shall be bound by the provisions of the Karnataka Excise Act, 1965 and any general or special rules prescribed or which may from time to time be prescribed thereunder.
2. The privilege under this licence extends to the sale of [Indian liquor (other than arrack)] or Foreign liquors of the brands furnished by the licensee. Any alterations and additions to the lists furnished should be approved by the Deputy Commissioner. No liquors below the strength or 25 [under proof] in case of brandy, Whiskey and Rum and 35 [under proof] in case of Gin and not more than 8 per cent of alcohol by volume in case of Beer will ordinarily be included in the list.
3. The holder of this licence shall upon requisition by any Officer not below the grade of an Sub-Inspector of Excise be bound to produce to such officer the original invoice showing the importation of all liquors for the sale of which this licence is granted for inspection and to allow the samples of liquors in the shop to be tested.
4. The licensee is bound to maintain correct daily accounts of transactions and submit the return every month to the excise officers concerned, within the first week of the following month.

5. The licence my be suspended or cancelled in accordance with the provisions of Section 29 of the Act and licensee or his employee shall be liable for prosecution for breach of any of the conditions of the licence, under the provisions of the Act or the rules and orders thereunder.

6. The licence shall continue in force till the …………

7. The sale of liquor to the public will be in sealed bottles of capacity of 0.180, 0.300, 0.375, 0.600 and 0.750 litres in respect of liquors and 0.325 and 0.650 litres in the case beer. The maximum quantity of liquors and beer to be sold at a time should not exceed:

| | |
|---|---|
| (1) Foreign liquors | 9.1 litres |
| (2) Indian liquors (other than arract) | 2.3 lirres |
| (3) Beer | 18.2 litres |

8. No liquor shall be allowed to be drunk on the premises.

9. The opening and closing hours shall be from (9.00 a.m. to 10.30 p.m.)

Office of the Deputy Commissioner

…………District                                        Deputy Commissioner

Date…………                                        …………..District.

13) ಆದ್ದರಿಂದ, ಮೇಲಿನ ಅಂಶಗಳನ್ನು ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 29 ರನ್ವಯ ಲೈಸೆನ್ಸ್ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡುವ ಸನ್ನದುದಾರರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಿದರೆ ಅವರು ಪುನಃ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡುವ ಸಾಧ್ಯತೆಯಿದ್ದು, ಲೈಸೆನ್ಸ್ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡುವ ಸನ್ನದುದಾರರ ಸನ್ನದನ್ನು ನವೀಕರಿಸದೆ ಇರುವುದು ಸೂಕ್ತವೆಂದು ಕಂಡುಬರುತ್ತದೆ. ಸಾಮಾನ್ಯವಾಗಿ ಅಬಕಾರಿ ಕಾಯಿದೆಯಡಿಯಲ್ಲಿ ಮದ್ಯ ಮಾರಾಟ ಮಾಡಲು ನೀಡುವ ಸನ್ನದನ್ನು ಪ್ರತಿವರ್ಷ ನವೀಕರಿಸಬೇಕಾಗಿದ್ದು, ಅಂತಹ ಸಂದರ್ಭಗಳಲ್ಲಿ ಲೈಸೆನ್ಸ್ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡುವ ಸನ್ನದುದಾರರ ಸನ್ನದನ್ನು ನವೀಕರಿಸುವುದನ್ನು ತಿರಸ್ಕರಿಸಲು ಸಂಬಂಧಪಟ್ಟ ಇಲಾಖೆಗೆ ಅವಕಾಶವಿರುತ್ತದೆ. ನ್ಯಾಯೋಚಿತ ದೃಷ್ಟಿಯಿಂದ ಮತ್ತು ಮದ್ಯ ಮಾರಾಟ ವ್ಯವಹಾರವನ್ನು ನ್ಯಾಯೋಚಿತವಾಗಿ ನಡೆಸುವ ದೃಷ್ಟಿಯಿಂದ ಸನ್ನದು ನಿಬಂಧನೆಗಳನ್ನು ಉಲ್ಲಂಘಿಸಿದ ಸನ್ನದುದಾರರ ಸನ್ನದನ್ನು, ಒಂದು ವರ್ಷದ ಸನ್ನದು ಅವಧಿ ಮುಗಿದ ನಂತರ ಮುಂದಿನ ವರ್ಷಕ್ಕೆ ನವೀಕರಣ ಗೊಳಿಸದಿರುವುದು ಸೂಕ್ತವೆಂದು ಕಂಡುಬರುತ್ತದೆ. ಸನ್ನದು ನಿಬಂಧನೆಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡಿರುವ ಬಗ್ಗೆ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿ ಸನ್ನದುದಾರರು ದಂಡವನ್ನು ಪಾವತಿಸಿದ ನಂತರ ಪುನಃ ಮುಂದಿನ ವರ್ಷಕ್ಕೆ ಅಂತಹ ಸನ್ನದುದಾರರಿಗೆ ಸನ್ನದನ್ನು ನವೀಕರಿಸುವುದು ನ್ಯಾಯೋಚಿತವಾಗುವುದಿಲ್ಲ ಮತ್ತು ನ್ಯಾಯೋಚಿತ ದೃಷ್ಟಿಯಲ್ಲಿ ಸಮಂಜಸವಾಗಿರುವುದಿಲ್ಲ. ಕ್ರಿಮಿನಲ್ ಪ್ರಕರಣ ದಾಖಲಾದ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ದಂಡವನ್ನು ಪಾವತಿಸಿದ ಸನ್ನದುದಾರರ

ಸನ್ನದನ್ನು ಪುನಃ ನವೀಕರಿಸಿದರೆ ಅಕ್ರಮ ಮದ್ಯ ಮಾರಾಟಕ್ಕೆ ಪ್ರೋತ್ಸಾಹ ಹಾಗೂ ಕುಮ್ಮಕ್ಕು ನೀಡಿದಂತಾಗುತ್ತದೆ. ಕಾನೂನು ಬಾಹಿರ ಹಾಗೂ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಬೇಕಾಗಿವೆ. ಮದ್ಯ ಮಾರಾಟ ಮತ್ತು ವ್ಯವಹಾರವನ್ನು ನ್ಯಾಯೋಚಿತವಾಗಿ ನಡೆಯುವ ದೃಷ್ಟಿಯಲ್ಲಿ ಸನ್ನದುಗಳನ್ನು ನವೀಕರಿಸುವಾಗ ಸೂಕ್ತ ಕ್ರಮಗಳನ್ನು ಅನುಸರಿಸುವ ಅವಶ್ಯಕತೆ ಕಂಡುಬರುತ್ತಿದೆ.

14) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಅಬಕಾರಿ ಕಾಯಿದೆ ಕಲಂ 29 ರನ್ವಯ ಲೈಸೆನ್ಸ್ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡಿರುವ ಹಾಗೂ ಯಾವ ಸನ್ನದುದಾರರ ವಿರುದ್ಧ ಮೊಕದ್ದಮೆಗಳು ದಾಖಲಾಗಿವೆಯೋ ಮತ್ತು ಯಾವ ಸನ್ನದುದಾರರು ದಂಡವನ್ನು ಪಾವತಿಸಿರುತ್ತಾರೋ ಅಂತಹ ಸನ್ನದುದಾರರ ಸನ್ನದನ್ನು ನವೀಕರಿಸದಂತೆ ಸಂಬಂಧಪಟ್ಟ ಇಲಾಖೆ/ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಶಿಫಾರಸ್ಸು ಮಾಡಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

23/1/16

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.